# ಕ್ರಿಕೆಟ್ ಮೆಕ್ಕಾ ಬದಲಾಯಿತೆ?



**ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣವನ್ನು ‘ಕ್ರಿಕೆಟ್ ಮೆಕ್ಕಾ’ ಎನ್ನುತ್ತಿದ್ದರು. ಈಗ ಅಹಮದಾಬಾದ್‌ನಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನ ಕ್ರೀಡಾಂಗಣ ಅಂತರರಾಷ್ಟ್ರೀಯ ಕ್ರಿಕೆಟ್ ನಕಾಶೆಯಲ್ಲೂ ರಾಜಧಾನಿಯ ಸ್ಥಾನ ಪಡೆದುಕೊಂಡುಬಿಟ್ಟಿದೆ. ವಿಶ್ವಕಪ್ ಕ್ರಿಕೆಟ್ ಆಯೋಜಿಸಲು ಸಹಜವಾಗಿ ನಡೆಯುವ ಲಾಬಿಗಳೆಲ್ಲ ಈ ಸಲ ಮುಕ್ಕಾಗಿವೆ ಎನ್ನುವ ದೊಡ್ಡ ದನಿ ಕೇಳುತ್ತಿದೆ.**

■ **ವಿಶಾಖ ಎನ್.**

ಅಹಮದಾಬಾದ್‌ನ ಲೊಯೊಲಾ ಹಾಲ್ ಬಳಿ ಅಮಿತ್ ಶಾ ಕಾರು ನಿಲ್ಲುತ್ತಿತ್ತು. ಅದರಿಂದ ಅವರ ಪುತ್ರ ಜಯ್ ಶಾ ಕೆಳಗಿಳಿದು, ಟಾಟಾ ಮಾಡಿ ನಡೆದು ಸಾಗುತ್ತಿದ್ದರು. ಜಯೇಂದ್ರ ಸೆಹಗಲ್ ಅಲ್ಲಿ ಜಯ್ ಶಾ ಅವರಿಗೆ ಕ್ರಿಕೆಟ್ ಪಾಠ ಹೇಳುತ್ತಿದ್ದರು. ಅವರ ಪ್ರಕಾರ ಒಳ್ಳೆಯ ಬ್ಯಾಟ್ಸ್‌ಮನ್ ಆಗಬಲ್ಲ ಗುಣಲಕ್ಷಣಗಳು ಜಯ್ ಶಾ ಅವರಲ್ಲಿ ಇದ್ದವು. ಆಟದ ಅಭ್ಯಾಸ ಹೀಗೆ ನಡೆಯುತ್ತಿದ್ದುದು ಬೇಸಿಗೆ ಕಾಲದಲ್ಲಿ. ಉಳಿದಂತೆ ಅಪ್ಪನ ಜತೆ ಷೇರು ಮಾರುಕಟ್ಟೆಯ ವಹಿವಾಟು ತಿಳಿದುಕೊಳ್ಳಲು ಜಯ್ ಶಾ ಓಡಾಡುತ್ತಿದ್ದರು. 2013ರಲ್ಲಿ ಗುಜರಾತ್ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿಯ ಹೊಣೆಗಾರಿಕೆ ನಿಭಾಯಿಸಲು ಜಯ್ ಶಾ ಅವರಿಗೆ ಗಾದಿ ಸಿಕ್ಕಿತು. ಆ ಬೆಳವಣಿಗೆಯ ಕುರಿತು ಆಗಲೇ ಪರ, ವಿರೋಧ ಚರ್ಚೆಗಳು ನಡೆದಿದ್ದವು. ಗುಜರಾತ್ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರೂ ಆಗಿದ್ದ ಅಮಿತ್ ಶಾ, ಈಗಿನ ಗೃಹ ಸಚಿವ. ಅವರು ಕಾರಿನಲ್ಲಿ ಕ್ರಿಕೆಟ್ ಕಲಿಯಲು ಬಿಟ್ಟು ಬರುತ್ತಿದ್ದ ಮಗನೀಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕಾರ್ಯದರ್ಶಿ.

ಅವರೀಗ ಕುಳಿತಿರುವುದು ಹಾಟ್‌ಸೀಟ್. ಈ ವರ್ಷ ಅಕ್ಟೋಬರ್ 5ರಿಂದ ನವೆಂಬರ್ 19ರವರೆಗೆ ವಿಶ್ವಕಪ್ ಕ್ರಿಕೆಟ್ ಪಂದ್ಯಗಳನ್ನು ಭಾರತ ಆಯೋಜಿಸುತ್ತಿದೆ. 1987, 1996 ಹಾಗೂ 2011ರಲ್ಲಿ ವಿಶ್ವಕಪ್ ಕ್ರಿಕೆಟ್ ಪಂದ್ಯಗಳನ್ನು ನಮ್ಮ ದೇಶ ಆಯೋಜಿಸಿತ್ತಾದರೂ ಪೂರ್ಣಪ್ರಮಾಣದಲ್ಲಿ ಅಷ್ಟೂ ಪಂದ್ಯಗಳು ನಮ್ಮ ದೇಶದಲ್ಲಿ ನಡೆಯುತ್ತಿರುವುದು ಇದೇ ಮೊದಲ ಸಲ. 10 ನಗರಗಳಲ್ಲಿ ಹತ್ತು ತಂಡಗಳು ಕಪ್‌ಗಾಗಿ ಆಡಲಿವೆ. ಉದ್ಘಾಟನಾ ಪಂದ್ಯ ಹಾಗೂ ಫೈನಲ್ ಎರಡೂ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿವೆ. ನೆನಪಿನ್ನೂ ಹಸಿರಾಗಿರುವಂತೆ ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯ ಫೈನಲ್ ನಡೆದದ್ದೂ ಇದೇ ಅಹಮದಾಬಾದ್‌ನಲ್ಲಿ.

ಅಹಮದಾಬಾದ್ ಅಲ್ಲದೆ ಹೈದರಾಬಾದ್, ಧರ್ಮಶಾಲಾ, ದೆಹಲಿ, ಚೆನ್ನೈ, ಲಖನೌ, ಪುಣೆ, ಬೆಂಗಳೂರು, ಮುಂಬೈ ಹಾಗೂ ಕೋಲ್ಕತ್ತದಲ್ಲಿ ಕ್ರಿಕೆಟ್ ಪಂದ್ಯಗಳು ನಡೆಯಲಿವೆ. 2011ರಲ್ಲಿ ಭಾರತ ವಿಶ್ವಕಪ್ ಜಯಿಸಿತ್ತು. ಆಗ ಪಂಜಾಬ್‌ನ ಮೊಹಾಲಿಯಲ್ಲಿ ಸೆಮಿಫೈನಲ್‌ನಲ್ಲಿ ಭಾರತ ಪಾಕಿಸ್ತಾನವನ್ನು ಸೋಲಿಸಿತ್ತು. ಆ ಕಾಲಘಟ್ಟದಲ್ಲಿ ದೇಶದ ಪ್ರತಿಷ್ಠಿತ ಕ್ರಿಕೆಟ್ ಕ್ರೀಡಾಂಗಣಗಳಲ್ಲಿ ಮೊಹಾಲಿ ಕೂಡ ಒಂದೆನಿಸಿಕೊಂಡಿತ್ತು. ಆ ವರ್ಷ ಫೈನಲ್ ನಡೆದದ್ದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ. ಈ ಸಲ ಮೊಹಾಲಿಗೆ ಪಂದ್ಯ ನೀಡಿಲ್ಲ. ದೆಹಲಿಯಲ್ಲಿ ನಡೆಯಲಿರುವ ಪಂದ್ಯಗಳ ಪೈಕಿ ಭಾರತವು ಅಫ್ಘಾನಿಸ್ತಾನದ ಎದುರು ಆಡುವ ಪಂದ್ಯವೇ ಇಲ್ಲಿನ ಪ್ರೇಕ್ಷಕರಿಗೆ ಮುಖ್ಯ. ಮುಂಬೈ ಹಾಗೂ ಕೋಲ್ಕತ್ತದಲ್ಲಿ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ.

ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸಲು ಸ್ಥಳಗಳನ್ನು ನಿರ್ಧರಿಸಿರುವುದರಲ್ಲೇ ರಾಜಕೀಯ ನಡೆದಿದೆ ಎಂದು ಕೆಲವು ಸ್ಥಳೀಯ ಕ್ರಿಕೆಟ್ ಸಂಸ್ಥೆಗಳ ಪದಾಧಿಕಾರಿಗಳು ಈಗಾಗಲೇ ಟೀಕೆಗಳನ್ನು ಮಾಡಿದ್ದಾರೆ. ಪಂಜಾಬ್‌ನಲ್ಲಿ ಆಮ್ ಆದ್ಮಿ ಪಾರ್ಟಿ ಸರ್ಕಾರವಿದೆ. ದೆಹಲಿಯಲ್ಲೂ ಅದೇ ಸ್ಥಿತಿ. ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ದೆಹಲಿ ಹಾಗೂ ಮುಂಬೈ ದಿಗ್ಗಜ ಕ್ರಿಕೆಟಿಗರನ್ನು ಕೊಟ್ಟಿವೆ. ಹಿಂದೆಲ್ಲ ಈ ನಗರಗಳು ಸಹಜವಾಗಿಯೇ ಪ್ರಮುಖ ಕ್ರಿಕೆಟ್ ಪಂದ್ಯಗಳಿಗೆ ಸಾಕ್ಷಿಯಾಗುತ್ತಿದ್ದವು. ಕೋಲ್ಕತ್ತ ಅಂತೂ ಭಾರತದ ಕ್ರೀಡಾಂಗಣಗಳಲ್ಲೇ ಅತಿ ಹೆಚ್ಚು ಪ್ರೇಕ್ಷಕರನ್ನು ಕೂರಿಸಿಕೊಳ್ಳಬಹುದಾದದ್ದು ಎಂದು ದಶಕಗಟ್ಟಲೆ ಹೆಸರಾಗಿತ್ತು.

ಕ್ರಿಕೆಟ್ ಈಗ ವಹಿವಾಟಿನ ಬಾಬತ್ತು. ಆಡಳಿತಶಾಹಿಗಳಿಗೆ ಆಡುಂಬೊಲ. ಐಪಿಎಲ್ ಶುರುವಾದ ಮೇಲಂತೂ ಹಣದ್ದೇ ಮೇಲಾಟ. ಇವೆಲ್ಲವುಗಳ ಅರಿವಿದ್ದೇ ಅಮಿತ್ ಶಾ ತಮ್ಮ ಮಗನನ್ನು ಕ್ರಿಕೆಟ್ ಕಲಿಯಲು ಕಾರಿನಲ್ಲಿ ಬಿಡುತ್ತಿದ್ದರು. ಯಾವ ನಗರದಲ್ಲಿ ಜಯ್ ಶಾ ಕ್ರಿಕೆಟ್ ಕಲಿಯುತ್ತಿದ್ದರೋ ಅದೇ ನಗರದಲ್ಲಿ ಕಳೆದ ವರ್ಷ ಸಭೆಯೊಂದು ನಡೆಯಿತು. ವಿಶ್ವಕಪ್ ಕ್ರಿಕೆಟ್ ಅನ್ನು ಭಾರತದ ಎಲ್ಲೆಲ್ಲಿ ಆಯೋಜಿಸಬೇಕು ಎಂದು ನಿರ್ಧರಿಸಲು ಸಮಿತಿ ರಚನೆಯಾದದ್ದು ಅದೇ